

# ತುಳಸಿ ಫೇಸ್‌ಪ್ಯಾಕ್

ತುಳಸಿಯಲ್ಲಿರುವ ಔಷಧೀಯ ಗುಣಗಳಿಂದಾಗಿ ಅದು ಆರೋಗ್ಯದ ಸಮಸ್ಯೆಗೆ ಪರಿಹಾರ ನೀಡುವ ಜತೆಗೆ ತ್ವಚೆಯ ಸೌಂದರ್ಯವನ್ನು ಕಾಪಾಡುವ ಶಕ್ತಿಯನ್ನು ಹೊಂದಿದೆ. ತುಳಸಿಯ ಫೇಸ್‌ಪ್ಯಾಕ್ ಈಗೀಗ ಜನಪ್ರಿಯವೂ ಆಗುತ್ತಿದೆ.

**■ ಹರ್ಷಿತ ಕೆ.ವಿ. ಪುತ್ತೂರು**

ತುಳಸಿ, ಅಲೊವೆರಾ, ಭೃಂಗ, ದಾಸವಾಳ ಮುಂತಾದ ಸಸ್ಯಗಳು ಉತ್ತಮ ಸೌಂದರ್ಯವರ್ಧಕಗಳು. ಮನೆಯಲ್ಲಿ ನಿತ್ಯವೂ ಪೂಜೆಗೆ ಬಳಸುವ ತುಳಸಿ ಆರೋಗ್ಯಕ್ಕೂ ಅತ್ಯಂತ ಪೂರಕವಾದ ಅದ್ಭುತ ಸಸ್ಯ. ಇದು ಅತ್ಯಂತ ಪವಿತ್ರವಾದ ಸಸ್ಯ.

ಆರೋಗ್ಯದಂತೆ ತುಳಸಿ ಸೌಂದರ್ಯಕ್ಕೂ ಬಹಳ ಪ್ರಯೋಜನಕಾರಿಯಾಗಿರುವ ಗಿಡ. ತುಳಸಿ ಎಂದರೆ ಸ್ಥೂಲಾರ್ಥದಲ್ಲಿ ಯಾವುದೇ ಸಸಿಗಳಿಗೆ ಹೋಲಿಸಲಾಗದ ಅಪ್ರತಿಮ ಸಸ್ಯ ಎಂದರ್ಥ. ತುಳಸಿ ಕಟ್ಟೆ ಇಲ್ಲದ ಮನೆ ಕಡಿಮೆ. ಎಲ್ಲ ಕಡೆ ಎಲ್ಲರ ಮನೆ ಮುಂದೆ ತುಳಸಿ ಕಟ್ಟೆ ನಿರ್ಮಿಸಿರುತ್ತಾರೆ. ತುಳಸಿಯಲ್ಲಿ ಕೃಷ್ಣ ತುಳಸಿ ರಾಮ ತುಳಸಿ ಎಂದು ಎರಡು ವಿಧಗಳಿವೆ. ಕೃಷ್ಣ ತುಳಸಿ ಕಪ್ಪಾಗಿಯೂ, ರಾಮ ತುಳಸಿ ತಿಳಿ ಬಣ್ಣದಾಗಿವೆ.

ದೈವಿಕ ಸ್ಥಾನ ಪಡೆದಿರುವ ತುಳಸಿ ಗಿಡ ಪೂಜನೀಯ ಮಾತ್ರವಲ್ಲ. ಆರೋಗ್ಯ ಮತ್ತು ಸೌಂದರ್ಯ ವರ್ಧಕವೂ ಆಗಿದೆ ಎಂಬುದು ನಿರ್ವಿವಾದ. ತುಳಸಿಯಲ್ಲಿರುವ ಔಷಧೀಯ ಗುಣಗಳಿಂದಾಗಿ ಅದು ಆರೋಗ್ಯದ ಸಮಸ್ಯೆಗೆ ಪರಿಹಾರ ನೀಡುವ ಜತೆಗೆ ತ್ವಚೆಯ ಸೌಂದರ್ಯವನ್ನು ಕಾಪಾಡುವ ಶಕ್ತಿಯನ್ನು ಹೊಂದಿದೆ. ಮನೆಯಂಗಳದಲ್ಲಿ ಸುಲಭವಾಗಿ ದೊರೆಯುವ ತುಳಸಿ ಗಿಡದಿಂದ ಆಗುವ ಪ್ರಯೋಜನಗಳು ಅನೇಕ.

* ತುಳಸಿ ಎಲೆಯ ಮೇಲಿಂದ ಬೀಸಿ ಬರುವ ಗಾಳಿಯು ದೇಹಕ್ಕೆ ಹಿತಕರ.
* ಬಾಯಿಹುಣ್ಣು, ಬಾಯಿ ದುರ್ವಾಸನೆಗೆ, ಹಲ್ಲುನೋವಿಗೆ ಉಪಯುಕ್ತ.
* ಒಂದೆರಡು ಹನಿ ತುಳಸಿ ರಸವನ್ನು

